# ನಮ್ಮೊಡನೆ

# ಶೌಚಾಲಯಗಳಿಲ್ಲದ ಶಾಲೆಗಳು

**ರಾಜ್ಯದ ಅರ್ಧದಷ್ಟು ಶಾಲೆಗಳಲ್ಲಿ ಶೌಚಾಲಯಗಳೇ ಇಲ್ಲ. ಅನೇಕ ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆಂದು ಪ್ರತ್ಯೇಕ ಶೌಚಾಲಯಗಳೂ ಇಲ್ಲ. ಶಿಕ್ಷಣ ಕ್ಷೇತ್ರ ಸುಧಾರಣೆಗೆ ಹತ್ತು ಹಲವು ಕಾರ್ಯಕ್ರಮಗಳ ಹೆಸರಲ್ಲಿ ಅಪಾರ ಹಣ ವ್ಯಯವಾಗುತ್ತಿರುವ ಈ ಕಾಲಘಟ್ಟದಲ್ಲೂ ನಮ್ಮ ಮಕ್ಕಳು ಕಲಿಯುವ ಶಾಲೆಗಳಲ್ಲಿ  ಮೂಲ ಸೌಕರ್ಯಗಳಿಲ್ಲದಿರುವ ಶೋಚನೀಯ ಸ್ಥಿತಿಗೆ ಯಾರನ್ನು ದೂಷಿಸಬೇಕು?**

ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಳಕ್ಕೆ ಹಲವಾರು ಕ್ರಮಗಳನ್ನು ಸರ್ಕಾರ ಕೈಗೊಂಡಿರುವಂತಹ ಕಾಲ ಇದು. ಆದರೆ ರಾಷ್ಟ್ರದಾದ್ಯಂತ ಶಾಲೆಗಳು ಹಾಗೂ ಶಾಲಾ ಮಕ್ಕಳ ಕುರಿತು ಇತ್ತೀಚೆಗೆ ಸರ್ಕಾರೇತರ ಸಂಸ್ಥೆ 'ಪ್ರಥಮ್' ನಡೆಸಿರುವ ಸಮೀಕ್ಷೆ ನಮ್ಮ ಶಿಕ್ಷಣ ವ್ಯವಸ್ಥೆ ಎತ್ತ ಸಾಗುತ್ತಿದೆ ಎಂಬುದರ ಚಿತ್ರಣ ನೀಡಿದೆ. ಅದರಲ್ಲೂ ಶೌಚಾಲಯಗಳ ಕುರಿತು ಬಹಿರಂಗಗೊಂಡಿರುವ ಅಂಶಗಳು ಆಘಾತಕಾರಿ. ಈ ವರದಿಯ ಪ್ರಕಾರ, 'ರಾಜ್ಯದ ಅರ್ಧದಷ್ಟು ಶಾಲೆಗಳಲ್ಲಿ ಶೌಚಾಲಯಗಳೇ ಇಲ್ಲ'. ಇದು ಸಣ್ಣ ಸಂಗತಿಯಂತೂ ಅಲ್ಲ. ಬೆಂಗಳೂರಿಗೆ ಮೆಟ್ರೊ ರೈಲು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇತ್ಯಾದಿ ಮೂಲಸೌಕರ್ಯಗಳ ಅಭಿವೃದ್ಧಿಯ ಮೈಲುಗಲ್ಲುಗಳ ಮಧ್ಯದಲ್ಲೇ ನಮ್ಮಮಕ್ಕಳು ಕಲಿಯುವ ಶಾಲೆಗಳಲ್ಲಿನ ಮೂಲಸೌಕರ್ಯಗಳು ಈ ಪರಿ ಅಲಕ್ಷ್ಯಕ್ಕೆ ಒಳಗಾದರೆ ಹೇಗೆ?

ನಿಲ್ಲಿ.. ಈ ವರದಿಯ ವಿವರ ಇಲ್ಲಿಗೇ ನಿಲ್ಲುವುದಿಲ್ಲ. ಶೇ.42ರಷ್ಟು ಪ್ರಾಥಮಿಕ ಶಾಲೆಗಳು ಹಾಗೂ ಶೇ.25ರಷ್ಟು ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆಂದು ಪ್ರತ್ಯೇಕ ಶೌಚಾಲಯಗಳೇ ಇಲ್ಲ ಎಂಬಂತಹ ಮತ್ತೊಂದು ದಂಗು ಬಡಿಸುವ ಅಂಶವನ್ನೂ ಇದು ಹೊರಗೆಡಹಿದೆ. ಹುಡುಗರ ಶೌಚಾಲಯಗಳನ್ನೇ ಹುಡುಗಿಯರೂ ಬಳಸಬೇಕಾದ ಸ್ಥಿತಿ ಇದೆ ಎಂದರೆ, ಪರಿಸ್ಥಿತಿ ಎಷ್ಟು ಕೆಟ್ಟದಾಗಿದೆ ಎಂದು ಊಹಿಸಿಕೊಳ್ಳಬಹುದು. ಹೋಗಲಿ, ಇರುವ ಶೌಚಾಲಯಗಳಾದರೂ ನೆಟ್ಟಗಿವೆಯೆ? ಊಹ್ಞೂಂ.. ಕೇವಲ ಶೇ.35ರಷ್ಟು ಹೆಣ್ಣುಮಕ್ಕಳ ಶೌಚಾಲಯಗಳು ಮಾತ್ರ ಬಳಸಬಹುದಾದ ಸ್ಥಿತಿಯಲ್ಲಿವೆಯಂತೆ. ಶೌಚಾಲಯ ಕಟ್ಟಡವಿದ್ದರೂ ನೀರಿಲ್ಲದಿರುವುದು ಬಹುತೇಕ ಕಡೆ ದೊಡ್ಡ ಸಮಸ್ಯೆ. ಶೌಚಾಲಯ ನಿರ್ವಹಣೆ ಇಲ್ಲವೇ ಇಲ್ಲ ಎಂಬುದು ಈ ಕಥೆಯ ಮತ್ತೊಂದು ಮಗ್ಗುಲಿನ ದುರಂತ.

ನಿಮಗೆ ಗೊತ್ತೇ ಇದೆ. ಹೆಣ್ಣುಮಕ್ಕಳು ಅರ್ಧದಲ್ಲೇ ಶಾಲೆ ಬಿಡಲು, ಶಾಲೆಗಳಲ್ಲಿ ಶೌಚಾಲಯ ಇಲ್ಲದಿರುವುದೇ ಮುಖ್ಯ ಕಾರಣ. ಈ ವಿಚಾರವನ್ನು ಹಲವು ದಶಕಗಳಿಂದ ಹಲವು ವೇದಿಕೆಗಳಲ್ಲಿ ನೀತಿ ನಿರೂಪಕರು, ಶಿಕ್ಷಣ ತಜ್ಞರು ಸೇರಿದಂತೆ ಎಲ್ಲರೂ ಹೇಳಿಕೊಂಡೇ ಬರುತ್ತಿದ್ದೇವೆ. ಹೀಗಿದ್ದೂ, ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಳಕ್ಕೆ ಹಲವು ಕಾರ್ಯಕ್ರಮಗಳ ಹೆಸರಲ್ಲಿ ಅಪಾರ ಹಣ ವ್ಯಯವಾಗುತ್ತಿರುವ ಈ ಕಾಲಘಟ್ಟದಲ್ಲೂ ಮೂಲ ಸೌಕರ್ಯಗಳಿಲ್ಲದಿರುವ ಶೋಚನೀಯ ಸ್ಥಿತಿಗೆ ಯಾರನ್ನು ದೂಷಿಸಬೇಕು?

ವಿಶೇಷವಾಗಿ ಪ್ರೌಢಶಾಲೆಯಲ್ಲಿ ಮಾಸಿಕ ಋತುಚಕ್ರದ ಸಮಸ್ಯೆಯನ್ನೂ ಎದುರಿಸುವ ಹೆಣ್ಣುಮಕ್ಕಳಿಗಂತೂ ಶೌಚಾಲಯ ಇಲ್ಲದಿರುವುದು ದೊಡ್ಡ ಸಮಸ್ಯೆಯೇ. ಶೌಚಾಲಯ, ಸ್ವಚ್ಛತೆ, ಸ್ಯಾನಿಟರಿ ನ್ಯಾಪ್‌ಕಿನ್, ವಿಸರ್ಜನೆ ಇತ್ಯಾದಿ ವಿಚಾರಗಳನ್ನು ಬಹಿರಂಗವಾಗಿ ಮಾತನಾಡಲೂ ಮುಜುಗರ ಪಟ್ಟುಕೊಳ್ಳುತ್ತಾ ಹಿಂಜರಿಕೆಯಲ್ಲೇ ಹೆಣ್ಣುಮಕ್ಕಳು ಬೆಳೆಯುವಂತಹ ಕಟ್ಟುಪಾಡುಗಳಿರುವ ಸಾಮಾಜಿಕ ವ್ಯವಸ್ಥೆ ನಮ್ಮದು. ಇದೆಲ್ಲದರಿಂದ ತೆರಬೇಕಾದ ಬೆಲೆ ಭಾರಿಯದೇ. ಏಕೆಂದರೆ ಈ ಹಂತದಲ್ಲೇ ನಮ್ಮ ಬಹುಪಾಲು ಹೆಣ್ಣುಮಕ್ಕಳು ಅರ್ಧದಲ್ಲೇ ಓದು ನಿಲ್ಲಿಸಿ ಶಾಲೆ ಬಿಡುತ್ತಾರೆ. ಇದು ಇನ್ನೂ ನಮ್ಮ ಆಡಳಿತಗಾರರಿಗೆ ಮನವರಿಕೆ ಆಗಬೇಕಿದೆ.  ಏಕೆಂದರೆ, ಸರ್ವ ಶಿಕ್ಷ ಅಭಿಯಾನ ಕಾರ್ಯಕ್ರಮದಡಿ ಶೌಚಾಲಯ ಸೇರಿದಂತೆ ಹಲವು ಮೂಲಸೌಕರ್ಯಗಳ ನಿರ್ಮಾಣಕ್ಕೆ ನಿಗದಿಯಾಗುವ ಹಣ ವ್ಯಯವಾಗುವುದೇ ಇಲ್ಲವೇ ಎಂಬಂತಹ ಪ್ರಶ್ನೆಯೂ ಇಲ್ಲಿ ಹುಟ್ಟುತ್ತದೆ.

ಕಂಪ್ಯೂಟರ್ ಶಿಕ್ಷಣ ಸೇರಿದಂತೆ ಹಲವು ಹೊಸ ಪ್ರಯೋಗಗಳನ್ನು ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸುತ್ತಿರುವ ಈ ಸಂದರ್ಭದಲ್ಲೂ ಪ್ರಕೃತಿಯ ಕರೆಗೆ ಓಗೊಡಲು ದೂರದ ಸ್ಥಳ ಹುಡುಕಿ ಅಲೆಯಬೇಕಾದ ಸ್ಥಿತಿ ಮಕ್ಕಳಿಗಿರುವುದು ವಿಪರ್ಯಾಸ. ಶಾಲಾ ಮಕ್ಕಳಷ್ಟೇ ಅಲ್ಲ, ಶಾಲಾ ಅಧ್ಯಾಪಕಿಯರೂ ಶೌಚಾಲಯ ಇಲ್ಲವೆಂದು ನೀರು ಕುಡಿಯದೆ 'ನಿಯಂತ್ರಣ ಸೂತ್ರ'ಅನುಸರಿಸುತ್ತಾರೆ. ಇದರಿಂದಾಗಿ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿರುವ ಉದಾಹರಣೆಗಳು ನಮ್ಮ ಸುತ್ತ ಇದ್ದೇ ಇವೆ.

ನಮ್ಮ ನಗರಗಳಲ್ಲಿ ಎಲ್ಲೆಂದರಲ್ಲಿ ಪುರುಷರು ಮೂತ್ರ ವಿಸರ್ಜಿಸುವ ಪರಿಪಾಠ ಕಂಡು ಪೌರಪ್ರಜ್ಞೆಯೇ ಇಲ್ಲವಲ್ಲಾ ಎಂದು ಜುಗುಪ್ಸೆ ಪಟ್ಟುಕೊಳ್ಳುತ್ತೇವಲ್ಲವೆ? ಈ ಬಗೆಯ ಪೌರಪ್ರಜ್ಞೆ ನಿಜಕ್ಕೂ ಬೆಳೆಯಬೇಕಿರುವುದು ಎಳೆಯ ವಯಸ್ಸಿನಲ್ಲಿ ಶಾಲೆಗಳಲ್ಲಿ. ಸ್ವಚ್ಛ ಶೌಚಾಲಯ ಅಭ್ಯಾಸದ ಬಗ್ಗೆ ಬಾಲ್ಯದಲ್ಲೇ ಅರಿವು ಮೂಡಬೇಕು. ಆದರೆ ರಾಜ್ಯದ ಶೇ. 51.9 ಪ್ರಾಥಮಿಕ ಶಾಲೆಗಳಲ್ಲಿ ಬಳಸಬಹುದಾದ ಶೌಚಾಲಯಗಳೇ ಇಲ್ಲ ಎಂದಾದಾಗ ಈ ಪ್ರಜ್ಞೆ ಬೆಳೆಸಲು ಪೂರಕವಾದ ಮೂಲ ಸೌಕರ್ಯವನ್ನೇ ಒದಗಿಸದ ನಮ್ಮ ಆಡಳಿತ ವ್ಯವಸ್ಥೆಯ ವೈಫಲ್ಯ ಎದ್ದು ಕಾಣುತ್ತದೆ. ಶಾಲೆಗಳ ಪಠ್ಯಗಳಲ್ಲೇ ಸ್ವಚ್ಛತೆ ಹಾಗೂ ಸ್ವಚ್ಛ ನೀರು ಅಭ್ಯಾಸಗಳ ವಿಚಾರಗಳಿರಬೇಕು. ಇದಕ್ಕೆ ಮುಂಚೆ ಶಾಲೆಗಳಲ್ಲಿ ಸ್ವಚ್ಛ ಶೌಚಾಲಯ ಹಾಗೂ  ಸ್ವಚ್ಛ ಕುಡಿಯುವ ನೀರಿನ ಸೌಲಭ್ಯ ಮಕ್ಕಳ ಮೂಲಭೂತ ಹಕ್ಕು ಎಂಬುದನ್ನು ನಾವು ಅರಿಯಬೇಕಿದೆ.

■ ಸಿ. ಜಿ. ಮಂಜುಳಾ

